ಬರ್ದಿರೋ ನಿಂಗೇ ಈ ನಾಡೀ ಪೊಗ್ರು ಐತೇಂದ್ರೆ... ನಿನ್ನಂಥ ಬೊಗುಳೋ ನಾಯ್ಗುಳ್ಗೆಲ್ಲಾ ಉತ್ರ ಕೊಡೋ ತೆವ್ಲು ನಂಗಿಲ್ಲ. ಅಷ್ಟುಕ್ಕೂ ನಾನೇನು ನಿಮ್ಮಪ್ಪುಂಗೆ ಹುಟ್ಟಿದ್ದೀನಾ ನೀನೇಳಿದ್ಕೆಲ್ಲಾ ಬಾಲ ಅಳ್ಳಾಡ್ಸಾಕೆ?' ಶಂಭುಲಿಂಗನೂ ರಾಂಗಾಗಿದ್ದ.

ವೀರಭದ್ರ ಶಂಭುಲಿಂಗನ ಮೇಲೆ ಆನಾಡಿ ಎಗರಾಡಲು ಅದಲ್ಲದೆ ಮತ್ತೊಂದು ಬಲವಾದ ಕಾರಣವಿತ್ತು. ಅದೇಂದರೆ ವರ್ಷದ ಹಿಂದೆ ವೀರಭದ್ರನ ಮನೆಗೆ ಸತೊಂಬತ್ತು ಕಾಲವೂ ಕೆಲಸಕ್ಕೆ ಬರುತ್ತಿದ್ದ ಆಳು ಚಿಕ್ಬೋರ ಅದೊಂದು ದಿನ ಕೆರೆಯಲ್ಲಿ ಮರಳು ತೋಡುವಾಗ ಮೇಲಿನ ಮಣ್ಣು ಕಸ್ಸಂಡು ಅದರಡಿ ಸಿಕ್ಕಿ ಅಸುನೀಗಿದ್ದ. ಆಗ ಹುಡುಸ್ಲೇಗೌಡನನ್ನು ಎದುರಾಕಿಕೊಳ್ಳಲು ದಮ್ಮಿಲ್ಲದ ಮಂದಿ ಮೇಲ್ಮೇಲೆ, 'ಅಯ್ಯೋ ಇಳ್ಗೆ ಅವ್ನ ಭೂಮಿ ರುಣ ಮುಗ್ದತ್ತು ಬುಡ್ರಿ,' ಅಂತಲೋ, 'ಅವ್ನು ಅಂಗೇ ಸಾಯ್ಬೇಕು ಅಂತ ಅಣೇಲಿ ಬರ್ದುದ್ರೆ ಯಾರ್ತಾರ್ನೇ ಏನ್ಮಾಡಾಕಾದದು,' ಅಂತಲೋ ಚಿಕ್ಬೋರನ ಸಾವನ್ನು ವಿಧಿಯಾಟಕ್ಕೆ ಥಳುಕಾಕಿ ಒಳಗೊಳಗೇ ಗೌಡನ ಇಸಪಾತಕ ಬುದ್ಧಿಗೆ ಆಗಬಹುದಾದ ತಕ್ಕ ಶಾಸ್ತಿಗಾಗಿ ಕಾದಿದ್ದರು. ಹುಡುಸ್ಲೇಗೌಡನೂ ತೋರಿಕೆಯ ಸಂಕಟವನ್ನು ತೋಡಿಕೊಂಡು ಕೈತೊಳೆದುಕೊಳ್ಳಲು ನೋಡಿದ್ದ. ಆಗ ಶಂಭುಲಿಂಗ ಮತ್ತವನ ಗೆಳೆಯರು ತಕರಾರು ತೆಗೆದಿದ್ದರಿಂದ ಹುಡುಸ್ಲೇಗೌಡ ಉರಿದುಹೋಗಿದ್ದ. 'ಇದುನ್ನೆಲ್ಲಾ ಕೇಳಾಕೆ ನೀವ್ಯಾರು? ಅದೇನ್ ಮಾಡ್ಬೇಕೂಂತ ನಂಗೆ ಗೊತ್ತೈಯ್ತೆ' ಅಂತ ದಡಬಡಿಸಿದ್ದ. ಆದರೆ, ಒಳಗೊಳಗೇ ಇದು ತನ್ನ ಬುಡಕ್ಕೆ ಬಿಸಿನೀರು ಕಾಯಿಸೋದು ಗ್ಯಾರಂಟಿ ಅಂತಾನೂ ಪತರಗುಟ್ಟಿದ್ದ. 'ಗೌಡ್ರೇ ಇದು ಹಳೇ ಕಾಲ ಅಲ್ಲ, ನೀವು ಹೆಂಗ್ ಬೇಕೋ ಹಂಗೆ ನಿಮ್ ಮೂಗಿನ್ ನೇರಕ್ಕೆ ನಡ್ಕಣಾಕೆ. ಕಾನೂನು ಅಂತ ಒಂದೈತೆ,' ಅಂದಿದ್ದ ಶಂಭುಲಿಂಗನ ಮಾತುಗಳಿಗೆ ಥಂಡೊಡೆದುಹೋಗಿದ್ದ ಹುಡುಸ್ಲೇಗೌಡ. 'ಈ ಮಟ್ಗೆ ಈ ಹೈಕ್ಳೆಲ್ಲಾ ಚಿಗುತ್ಕಣಾಕೆ ಆ ಮೇಷ್ಟರ ಕುಮ್ಮಕ್ಕೇ ಕಾರ್ಣ. ಅವ್ನಿಗೊಂದು ಗತಿ ಕಾಣ್ಸಿದ್ರೆ ಇವ್ರು ತಂತಾನೇ ದಾರಿಗ್ ಬತ್ತಾರೆ,' ಅಂತ ಅಂದುಕೊಂಡು ತನ್ನ ಕ್ಷೇತ್ರದ ಶಾಸಕರನ್ನು ಕಂಡಿದ್ದ. 'ಈ ಮೇಷ್ಟರು ಪಾಠ ಮಾಡೋದನ್ನ ಬಿಟ್ಟು ನಂದೊಂದೆಲ್ಲಿಕ್ಕಿ ಅಂತ ಎಲ್ಲಾದ್ಕೂ ಮೂಗ್ ತೂರಿಸ್ಕಂಡು ಬತ್ತನೆ. ಇವ್ನಿಗ್ಯಾಕೆ ಊರ ಉಸಾಬರಿ ಅಂತೀನೀ? ಊರಿನ್ ಹುಡ್ಗುರ್ನೆಲ್ಲಾ ಎತ್ಕಟ್ಟಿ ಇಲ್ಲುದ್ ಸಲ್ಲುದ್ ಮಾಡಾಕೆ ಕುಮ್ಮಕ್ ಕೊಡ್ತಾವ್ನೆ ಇವ್ನನ್ನ ಈಗಿಂದೀಗ್ಲೇ ಎತ್ತಂಗ್ಡಿ ಮಾಡುಸ್ಬುಡಿ,' ಅಂತ ಅಲವತ್ತುಕೊಂಡಿದ್ದ. ಇದರಿಂದ ಆಗಬಹುದಾದ ಯಡವಟ್ಟುಗಳನ್ನು ಗ್ರಹಿಸಿದ್ದ ಶಾಸಕರು, 'ರೀ ಗೌಡ್ರೆ ಉಗ್ರಾಗೆ ಹೋಗಾದ್ಕೆ ಯಾಕ್ರೀ ಕೊಡ್ಲಿ ತಗಂತೀರಾ? ಇದೇನಾರಾ ಕೇಸುಗೀಸು ಅಂತ ಆದ್ರೆ ನಿಮ್ ಮನೆ ಮಟ ಉಳ್ಯತ್ತೇನ್ರಿ? ನಾನೇ ಬಂದು ಬಗೆಹರುಸ್ತೀನಿ ನಡೀರಿ,' ಅಂತ ಸಾಗಾಕಿದ್ದರು. ಅದರಂತೆ ಶಾಸಕರು ಹುಡುಸ್ಲೇಗೌಡರಿಗೆ ಚೆನ್ನಾಗಿಯೇ ಬರೆ ಎಳೆದು ಚಿಕ್ಬೋರನ ಕುಟುಂಬಕ್ಕೆ ಪರಿಹಾರ ಕೊಡಿಸಿದ್ದರು. ಆವಾಗಿನಿಂದ ಶಂಭುಲಿಂಗನ ಗೆಳೆಯರನ್ನು ಕಂಡರೆ ಹುಡುಸ್ಲೇಗೌಡ ಮಚ್ರ ಮಸೀತಿದ್ದ. ಅದು ಅವನ ಮಗ ವೀರಭದ್ರನಿಗೂ ತಟಾಯ್ಸಿತ್ತು. ಯಾವ್ದಾರ ಯಡ್ವಟ್ಟು ಮಾಡಿ ಸಿಕ್ಕಾಕಂಡ್ರೆ ಒಂದು ಗತಿ ಕಾಣ್ಸಾಕೆ ಅವರಿಬ್ಬರನ್ನೂ ತುದಿಗಾಲಲ್ಲಿರಿಸಿತ್ತು.

ಹಿಂಗಿರುವಾಗ ಶಂಭುಲಿಂಗ ಮತ್ತವನ ಗೆಣೆಕಾರರನ್ನೆಲ್ಲಾ ಒಂಗೈಮಾಡಿ ಸುಂದ್ರೇಶ ಮೇಷ್ಟರು ಹಿನ್ನೆಲೆಯಲ್ಲಿ ನಿಂತು, 'ಶಂಭುಲಿಂಗೇಶ್ವರ ಯುವಕರ ಸಂಘ'ವನ್ನು ಹುಟ್ಟಾಕುವ ಮುಖೇನ ತಾನು ಓದುವ ಕಾಲಕ್ಕೆ ಕಂಡುಂಡಿದ್ದ ಚಳವಳಿಗಳ ಕಾವಿಗೆ ಕದರು ಕಂಡುಕೊಳ್ಳುವ ಹುಮ್ಮಸ್ಸು ಮಾಡಿದ್ದರು. ಆದರೆ, ಅದನ್ನೇ ಮುಂದಿಟ್ಟುಕೊಂಡು ಈ ಹಿಂದೆ ಮೇಷ್ಟರು ನಕ್ಸಲ್ ಚಳವಳಿಯಲ್ಲಿ ಇದ್ದವರೆಂದೂ ಅದನ್ನೇ ಈಗ ಮೇಷ್ಟರ ಕೆಲಸದಲ್ಲೂ ಮಾಡುತ್ತಿರುವರೆಂದೂ ರಾತ್ರಿ ಹೊತ್ತು ಗುಂಪು ಕಟ್ಟಿಕೊಂಡು ಕಾಡು ಮೇಡು ಸುತ್ತುತ್ತಾರೆಂದೂ ಹೀಗೇ ಬಿಟ್ಟರೆ ಮಕ್ಕಳನ್ನು ದಾರಿ ತಪ್ಪಿಸುತ್ತಾರೆಂದೂ ಮೇಷ್ಟರ ಮೇಲೆ ಇಲಾಖೆಯ ಮೇಲಧಿಕಾರಿಗಳಿಗೆ ಮೂಗರ್ಜಿ ಬರೆದಿತ್ತು ವೀರಭದ್ರನ ಗ್ಯಾಂಗು.